ದಿನಾಂಕಃ 19-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀಸವಾಲುಃ-ಎದುರುದಾರರ ಪರ ಶ್ರೀ . ಎಸ್ ಕೆ ವಕೀಲರಿಂದ.</u>

ಮೇಲ್ಮನವಿ, ಮಧ್ಯಂತರ ಅರ್ಜಿ ನಂ.1 ಮತ್ತು ಅದರ ಮೇಲೆ ಸಾಕ್ಷ್ಯ ಪ್ರಮಾಣ ಪತ್ರ ಬರೆಯಲು ಮಾಹಿತಿ ನಾನೇ ಸ್ವತಃ ನೀಡಿರುತ್ತೇನೆ. ನಾನು ಮುತ್ತೂಟ ಪೈನಾನ್ಸ್ ಪ್ರತಿನಿಧಿ ಎಂದರೆ ಸರಿ. ಮೇಲ್ಮನವಿ ಸಲ್ಲಿಸಲು ನಮ್ಮ ಮೇಲಾಧಿಕಾರಿ ಆಫೀಸಿನಿಂದ ಪರವಾನಿಗೆ ಪಡೆದುಕೊಳ್ಳುತ್ತೇವೆ. ಅದೇ ರೀತಿ ದಾವೆಯಲ್ಲಿ ಹಾಜರಾಗಲು ಮತ್ತು ದರಖಾಸ್ತು ಅರ್ಜಿಯಲ್ಲಿ ಹಾಜರಾಗಲು ನಮ್ಮ ಮೇಲಾಧಿಕಾರಿ ಆಫೀಸಿನಿಂದ ಪರವಾನಿಗೆ ಪಡೆದುಕೊಳ್ಳುತ್ತೇವೆ. ಹಾಗೇ ಯಾವ ಪ್ರಕ್ರಿಯೆ ಮೂಲಕ ಪರವಾನಿಗೆ ಪಡೆಯಬೇಕಾಗುತ್ತದೆ ಎಂದು ಲಿಖಿತ ರೂಪದಲ್ಲಿ ಯಾವುದೇ ನಿಯಮಗಳು ಇಲ್ಲ ಎಂದರೆ ಸರಿ. ನಮ್ಮ ಮೇಲಾಧಿಕಾರಿ ಕಚೇರಿ ತ್ರೀವೇಂದ್ರುಂ ಇಲ್ಲಿ ಇರುತ್ತದೆ. ನಾವು ಇ-ಮೇಲ್ ಬಳಸಿ ನಮ್ಮ ಮೇಲಾಧಿಕಾರಿಯೊಂದಿಗೆ ಸಂಪರ್ಕ ಮಾಡುತ್ತೇವೆ. ಇ-ಮೇಲ್ ತಕ್ಷಣದಲ್ಲಿ ಸಂಪರ್ಕ ಹೊಂದುತ್ತದೆ ಎಂದರೆ ಸರಿ. ಮೇಲ್ಮನವಿ ಸಲ್ಲಿಸಲು 4 ತಿಂಗಳು ವಿಳಂಬವಾಗಿರುವುದಾಗಿ ಹೇಳಿದ್ದು, ಈ ಕುರಿತು ನಾವು ಮೇಲಾಧಿಕಾರಿಯೊಂದಿಗೆ ಇ-ಮೇಲ್ ಸಂಪರ್ಕ ಸಾಧಿಸಿದ ಬಗ್ಗೆ ತೋರಿಸಲು ಕಾಗದ ಪತ್ರ ಹಾಜರುಪಡಿಸಿಲ್ಲ. ಹಾಗೇ ಈಗಲೂ ಸಹ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನಮ್ಮ ತ್ರೀವೇಂದ್ರುಂ ಮೇಲಾಧಿಕಾರಿಗಳು ಈ ಮೇಲ್ಮನವಿಯ ಪಕ್ಷಗಾರರು ಅಲ್ಲ ಎಂದರೆ ಸರಿ. ಹಾಗೇ ಇ-ಮೇಲ್ ಸಂಪರ್ಕ ಸಾಧಿಸಿದ ಬಗ್ಗೆ ಎದುರುದಾರರು ನಮ್ಮ ಬ್ಯಾಂಕಿಗೆ ಅರ್ಜಿ ಸಲ್ಲಿಸಿದಲ್ಲಿ ಅದರ ಪ್ರತಿ ಪೂರೈಸುತ್ತೇವೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎದುರುದಾರರ ಆಸ್ತಿಯನ್ನು ಒಂದು ದಿನದಲ್ಲಿ ಲೀಲಾವು ಮಾಡಿರುತ್ತೇವೆ ಎಂದರೆ ಸರಿ. ಲೀಲಾವು ಪ್ರಕ್ರಿಯೆ ಸವಣೂರಿನಲ್ಲಿ ಆಗಿರುತ್ತದೆ. ನಮ್ಮ ಬ್ಯಾಂಕಿನವರು ಮೇಲಾಧಿಕಾರಿಯವರೊಂದಿಗೆ ಈ ಮೇಲ್ಮನವಿ ಸಲ್ಲಿಸಲು ಅನುಮತಿ ಬೇಡಿ ಯಾವುದೇ ಸಂಪರ್ಕ ಸಾಧಿಸಿಲ್ಲ ಎಂದರೆ

ಸರಿಯಲ್ಲ. ಎದುರುದಾರರು ನಮ್ಮ ಬ್ಯಾಂಕಿನ ಮೇಲೆ ದರಖಾಸ್ತು ಅರ್ಜಿ ಸಲ್ಲಿಸಿದ್ದರಿಂದ ನಾವು ಈ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).